ಇ) ಸವಣೂರು ತಾಲ್ಲೂಕಿನಲ್ಲಿ ಕಾರಡಗಿಯಿಂದ ಕೆಂದಾಪುರದವರೆಗೆ ವಯಾ ಬೆಳಿನಕಟ್ಟೆ, ರಸ್ತೆಯೂ ಸರ್ಕಾರದಿಂದ ಅನುಮೋದಿತವಾಗಿರುವ ಪಟ್ಟಿಯಲ್ಲಿ ಸೇರಿರುವುದಿಲ್ಲ. ಆದರೆ ಅನುಮೋದನೆಯಾಗಿರುವ ಪಟ್ಟಿಯಲ್ಲಿ ಕ್ರಮ ಸಂ10ರಲ್ಲಿ ಕಾರಡಗಿಯಿಂದ ಹುಲುಗೂರುವರೆಗೆ ಶಿಗ್ಗಾಂವ್ ರಸ್ತೆ ವಯಾ ಬೇಕನಕಟ್ಟೆ ರಸ್ತೆಯಲ್ಲಿ ಕಿ.ಮಿ. 0.35ರಿಂದ 3.15ರವರೆಗೆ ಸುಧಾರಣೆ ಮಾಡಲು ಕಾಮಗಾರಿಯ ಅಂದಾಜು ಪಟ್ಟಿಗೆ ಕೃಷಿ ಮಾರಾಟ ನಿರ್ದೇಶಕರ ಕಛೇರಿಯಿಂದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ) ಕರಡಗಿಯಿಂದ ಹುಲುಗೂರುವರೆಗೆ ಶಿಗ್ಗಾಂವ್ ರಸ್ತೆ ವಯಾ ಬೇಕನಕಟ್ಟೆ ದಿನಾಂಕ 14-8-97ರಂದು ರಸ್ತೆ ಅಭಿವೃದ್ಧಿ ಕಾಮಗಾರಿಯ ಅಂದಾಜು ಪಟ್ಟಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ವಿಷಯ: ತೆಂಗಿನ ಗಿಡ ಅಭಿವೃದ್ಧಿಗಾಗಿ ರೈತರಿಗೆ ಸಹಾಯವಾಗುವ ಯೋಜನೆಗಳು.

2642 (4058)

ಶ್ರೀ ಮಂಜುನಾಥ್ ಕುನ್ನೂರ್ (ಶಿಗ್ಗಾಂವ್): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ತೆಂಗಿನ ಗಿಡ ಅಭಿವೃದ್ಧಿಗಾಗಿ ರೈತರಿಗೆ ಸಹಾಯವಾಗುವ ಯೋಜನೆಗಳು ಯಾವುವು?

ಆ) ಹನಿ ನೀರಾವರಿ ಮಾಡುವಾಗ ರೈತರಿಗೆ ತೆಂಗಿನ ಗಿಡಕ್ಕೆ ಎಷ್ಟು ಸಬ್ಸಿಡಿ ಕೊಡಲಾಗುವುದು?

ಇ) ತೆಂಗಿನ ಗಿಡದ ಹೊಲದಲ್ಲಿ ಒಂದು ಸಾರಿ ಹನಿ ನೀರಾವರಿಗೆ ಸಬ್ಸಿಡಿ ಕೊಟ್ಟಾಗ ಅದೇ ಹೊಲದಲ್ಲಿ ತೆಂಗಿನ ಗಿಡದೊಂದಿಗೆ ಅಡಿಕೆ ಗಿಡ ಹಾಗೂ ಕಾಫಿ ಗಿಡವನ್ನು (ಇನ್‌ಟರಿಯಮ್ ಕ್ರಾಪ್) ಹಾಕಿದಾಗ ಅದಕ್ಕೆ ಪುನಃ ತೆಂಗಿನ ಗಿಡಕ್ಕೆ ಬಿಟ್ಟು ಅಡಿಕೆ ಗಿಡಕ್ಕೆ ಹಾಗೂ ಕಾಫಿ ಗಿಡಕ್ಕೆ ಹನಿ ನೀರಾವರಿ ಅವಕಾಶ ಮಾಡಿಕೊಡಲಾಗುವುದೆ?

ಶ್ರೀ ಡಿ.ಟಿ.ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು):

ಅ) ರಾಜ್ಯದಲ್ಲಿ ತೆಂಗಿನ ಬೆಳೆಯ ಸಮಗ್ರ ಅಭಿವೃದ್ಧಿಗಾಗಿ ಈ ಕೆಳಕಂಡ ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1) ತೆಂಗು ಪ್ರದೇಶ ವಿಸ್ತರಣೆ ಯೋಜನೆ

2) ತೆಂಗು ಸಸಿಗಳ ಉತ್ಪಾದನೆ ಮತ್ತು ವಿತರಣೆ ಯೋಜನೆ

3) ತೆಂಗು ಬೆಳೆಯ ಸಮಗ್ರ ಬೇಸಾಯಕ್ಕಾಗಿ ತೆಂಗು ಅಭಿವೃದ್ಧಿ ಯೋಜನೆ

4) ತೆಂಗಿನ ಕಪ್ಪು ತಲೆ ಹುಳುವಿನ ಸಮಗ್ರ ಹತೋಟಿಗಾಗಿ ಕೇಂದ್ರ ಪುರಸ್ಕೃತ ಯೋಜನೆ.

ಅ) ಒಂದು ಹೆಕ್ಟೇರ್ ತೆಂಗು ಬೆಳೆಗೆ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಿದಾಗ ಶೇ:70ರ ಸಹಾಯಧನ ರೂ. 1. 18683-00 ಮತ್ತು ಶೇ:90ರ ಸಹಾಯಧನ ರೂ. 24.021-00ಗಳನ್ನು ನೀಡಲಾಗುತ್ತಿದೆ.

(ರೈತರು 8X8 ಮೀ. ಅಂತರದಲ್ಲಿ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಿದಾಗ)

ಇ) ತೆಂಗಿನ ಗಿಡಕ್ಕೆ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಿ ಸಹಾಯಧನ ಪಡೆದುಕೊಂಡಿದ್ದಲ್ಲಿ ತೆಂಗಿನ ತೋಟದಲ್ಲಿ ಮಧ್ಯಂತರ ಬೆಳೆಯಾಗಿ ಅಡಿಕೆಯನ್ನು ಬೆಳೆದಾಗ ಅಡಿಕೆ ಬೆಳೆಗೆ ಅಳವಡಿಸಿರುವ ಉಪಕರಣಗಳಿಗೆ ಮಾತ್ರ ಮಾರ್ಗ ಸೂಚಿಯ ಪ್ರಕಾರ ಸಹಾಯಧನವನ್ನು ನೀಡಲಾಗುವುದು. ಆದರೆ ಕಾಫಿ ಬೆಳೆಗೆ ಸಹಾಯಧನವನ್ನು ನೀಡಲು ಯೋಜನೆಯ ಮಾರ್ಗಸೂಚಿಯಲ್ಲಿ ಅವಕಾಶ ವಿರುವುದಿಲ್ಲ.

ವಿಷಯ: ಬಾಲವಿಕಾಸ ಮತ್ತು ಮಹಿಳಾ ಕಲ್ಯಾಣ ಯೋಜನೆ

2643 (3425)

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ): ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಲವಿಕಾಸ ಮತ್ತು ಮಹಿಳಾ ಕಲ್ಯಾಣ ಯೋಜನೆ ಅಡಿಯಲ್ಲಿ ಸ್ವಶಕ್ತಿ ಎಂಬ ಕಾರ್ಯಕ್ರಮವಿದೆಯೇ (ವಿವರಗಳನ್ನು ನೀಡುವುದು)

ಆ) ಈ ಕಾರ್ಯಕ್ರಮದಲ್ಲಿ ಕೇಂದ್ರಗಳನ್ನು ನಡೆಸಲು ಪ್ರತಿ ಕೇಂದ್ರಕ್ಕೆ ಸರ್ಕಾರ ಕೊಡುವ ಅನುದಾನವೆಷ್ಟು?

ಇ) ಅಂತಹ ಅನುದಾನ ಪಡೆಯಲು ಇರಬೇಕಾದ ಅರ್ಹತೆಗಳೇನು?

ಶ್ರೀಮತಿ ವಿಮಲಾಬಾಯಿ ಜಗದೇವರಾವ್ ದೇಶ್‌ಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು):

ಅ) ಹೌದು. ವಿಧವೆಯರು ಹಾಗೂ ಇತರೆ ಅಲ್ಪ ಆದಾಯದ ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿ ಮಾಡಲು ರಾಜ್ಯ ಸರ್ಕಾರವು 1995-96ನೇ ಸಾಲಿನಲ್ಲಿ ಸ್ವಶಕ್ತಿ